# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 05-10-2018ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಐದನೇ ಸಿಂಡಿಕೇಟ್ ಸಭೆಯ ನಡವಳಿಗಳು.**

**ಹಾಜರಿದ್ದ ಸದಸ್ಯರು:**

1. ಪ್ರೊ. ಆಯಿಷಾ ಎಂ. ಷರೀಫ್ – ಕುಲಪತಿಗಳು(ಪ್ರಭಾರ) ಹಾಗೂ ಅಧ್ಯಕ್ಷರು
2. ಕು. ಸಹನಾ ಶಿವಪ್ಪ – ಸದಸ್ಯರು
3. ಪ್ರೊ. ಎಸ್.ಎಲ್. ಸುರೇಶ್ – ಸದಸ್ಯರು
4. ಡಾ. ರಾಜಗೋಪಾಲ್ – ಸದಸ್ಯರು
5. ಡಾ. ಎ.ಟಿ. ಶಿವರಾಮು – ಸದಸ್ಯರು
6. ಡಾ. ಎಂ. ಪ್ರೀತಿ – ಸದಸ್ಯರು
7. ಶ್ರೀ ಆರ್.ನಾಗರಾಜ್
   ವಿಷಯ ಪರಿವೀಕ್ಷಕರು
   ಆಯುಕ್ತರು,
   ಸಾರ್ವಜನಿಕ ಶಿಕ್ಷಣ ಇಲಾಖೆ,
   ಕರ್ನಾಟಕ ಸರ್ಕಾರ.
   – ಅವರಿಂದ ನಾಮನಿರ್ದೇಶಿತರು – ಸದಸ್ಯರು
8. ಶ್ರೀ ಉದಯ್‌ಶಂಕರ್
   ಹೆಚ್ಚುವರಿ ನಿರ್ದೇಶಕರು
   ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ
   ಕರ್ನಾಟಕ ಸರ್ಕಾರ
   – ಅವರಿಂದ ನಾಮನಿರ್ದೇಶಿತರು – ಸದಸ್ಯರು
9. ಪ್ರೊ. ಜೆ. ಸೋಮಶೇಖರ್ – ಸದಸ್ಯರು
   ಕುಲಸಚಿವ(ಪರೀಕ್ಷಾಂಗ)
10. ಪ್ರೊ.ಆರ್.ರಾಜಣ್ಣ – ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

**ಹಾಜರಾಗದ ಸದಸ್ಯರು:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಮಾನ್ಯ ಕುಲಪತಿಗಳು ಸಿಂಡಿಕೇಟ್‌ನ ಐದನೇ ಸಾಮಾನ್ಯ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಮಾತನಾಡುತ್ತಾ ಕುಲಪತಿಗಳಾಗಿ ಈ ಸಭೆಯಲ್ಲಿ ಪ್ರಪ್ರಥಮವಾಗಿ ಅಧ್ಯಕ್ಷತೆ ವಹಿಸಿದ್ದು ಹಿಂದಿನ ಸಭೆಗಳಲ್ಲಿ ತಾವೆಲ್ಲರೂ ಸಹಕಾರ ನೀಡಿರುವಂತೆ ತಮಗೂ ಸಹಕಾರ ನೀಡಿ ಇಂದಿನ ಸಭೆಯಲ್ಲಿ ಮಂಡಿಸಲಾಗಿರುವ ವಿಷಯಗಳ ಬಗ್ಗೆ ಚರ್ಚಿಸಿ ಉತ್ತಮ ನಿರ್ಧಾರ ತೆಗೆದುಕೊಳ್ಳಲು ತಮ್ಮ ಸಲಹೆ

17/10/18

ನೀಡಬೇಕೆಂದು ಕೋರಿದರು. ನಂತರ ಸಭೆಯಲ್ಲಿ ಮಂಡಿಸಲಾಗಿರುವ ವಿಷಯಗಳ ಬಗ್ಗೆ ಮಾನ್ಯ ಕುಲಸಚಿವರು ವಿಷಯ ಮಂಡನೆ ಮಾಡಲು ತಿಳಿಸಿದರು.

ಮಾನ್ಯ ಕುಲಸಚಿವರು, ಪ್ರಭಾರ ಕುಲಪತಿಗಳಾಗಿ ಅಧಿಕಾರ ವಹಿಸಿಕೊಂಡ ನಂತರ ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿರುವ ಪ್ರೊ. ಆಯಿಷಾ ಎಂ. ಷರೀಫ್, ಡೀನರು, ವಾಣಿಜ್ಯ ನಿಕಾಯ, ವ್ಯವಹಾರ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರನ್ನು ಎಲ್ಲಾ ಸಿಂಡಿಕೇಟ್ ಸದಸ್ಯರುಗಳ ಪರವಾಗಿ ಸ್ವಾಗತಿಸಿದರು. ಆನಂತರ ಇದುವರೆವಿಗೂ ಮೈಸೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಗಳಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಪ್ರೊ. ಟಿ.ಕೆ.ಉಮೇಶ್ ಅವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| ವಿಷಯ ಸಂಖ್ಯೆ: I | ದಿನಾಂಕ 13–08–2018ರಂದು ನಡೆದ ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ |
| ತೀರ್ಮಾನ | ವಿಷಯ ಸಂಖ್ಯೆ 2018/8.33ಕ್ಕೆ ಸಂಬಂಧಿಸಿದಂತೆ ಶ್ರೀ ಕೆ.ಕೆ.ಮಂಜುನಾಥ ಇವರು ಈಗಾಗಲೇ ದಂಡನಾ ರೂಪದಲ್ಲಿ ಪಾವತಿಸಬೇಕಾಗಿದ್ದ ಹಣವನ್ನು ಕಟ್ಟಿರುವುದರಿಂದ ತೀರ್ಮಾನದಲ್ಲಿ ದಾಖಲಾಗಿರುವ "ವಿಶ್ವವಿದ್ಯಾನಿಯಲಯಕ್ಕೆ ದಂಡನಾ ರೂಪದಲ್ಲಿ ಬರಬೇಕಾಗಿರುವ ಬಾಕಿ ಹಣ ರೂ. 25,936=00ಗಳನ್ನು ಪಿಂಚಣಿ ಸೌಲಭ್ಯದ ಹಣದಿಂದ ಮುರುಗಡೆ ಮಾಡಿಕೊಂಡು" ಎಂಬ ವಾಕ್ಯವನ್ನು ತೆಗೆದುಹಾಕಲು ತೀರ್ಮಾನಿಸಿತು. ಉಳಿದಂತೆ ದಿನಾಂಕ 13–08–2018ರಂದು ನಡೆದ ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು. |
| ವಿಷಯ ಸಂಖ್ಯೆ: II | ದಿನಾಂಕ 13–08–2018ರಂದು ನಡೆದ ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ. |
| ತೀರ್ಮಾನ | ವರದಿಯನ್ನು ಗಮನಿಸಲಾಯಿತು. |
| **2018/10.1** | ಡಾ. ನಿರಂಜನ, ಪ್ರಾಧ್ಯಾಪಕರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರು Director, Indian Cultural Centre, Dushanbe, Tajikistan ಹುದ್ದೆಗೆ ನಿಯೋಜನೆ ಆಧಾರದ ಮೇಲೆ ನೇಮಕಗೊಂಡಿದ್ದ ಹಿನ್ನೆಲೆಯಲ್ಲಿ ಈ ಹುದ್ದೆಗೆ ವರದಿ ಮಾಡಿಕೊಳ್ಳಲು ಅನುವು ಮಾಡಿಕೊಡಲು ಇವರನ್ನು ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ಬಿಡುಗಡೆ ಮಾಡಿರುವ ಕ್ರಮದ ಬಗ್ಗೆ ಸ್ಥಿರೀಕರಣಕ್ಕಾಗಿ. |
| ತೀರ್ಮಾನ | ಡಾ. ನಿರಂಜನ, ಪ್ರಾಧ್ಯಾಪಕರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರು Director, Indian Cultural Centre, Dushanbe, Tajikistan ಹುದ್ದೆಗೆ 03 ವರ್ಷಗಳಿಗೆ ಕೇಂದ್ರ ಸರ್ಕಾರವು ನೇಮಿಸಿ ನಿಯೋಜಿಸಿದ ಹಿನ್ನೆಲೆಯಲ್ಲಿ, ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ನಿಯೋಜನೆ ಆಧಾರದ ಮೇಲೆ ಕಳುಹಿಸುವ ಸಂದರ್ಭದಲ್ಲಿ ವಿಧಿಸುವ ಷರತ್ತುಗಳನ್ವಯ, ದಿನಾಂಕ 27–08–2018ರಿಂದ ಈ ಹುದ್ದೆಗೆ ವರದಿ ಮಾಡಿಕೊಳ್ಳಲು ಅನುವಾಗುವಂತೆ ಇವರನ್ನು |

Rajkumar 17/10/18

| | |
|---|---|
| | ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ಬಿಡುಗಡೆ ಮಾಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/10.2** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಂಕಿ ಅಂಶಗಳ ಘಟಕ ಸ್ಥಾಪನೆ ಕುರಿತು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಂಕಿ ಅಂಶಗಳ ಘಟಕ ಸ್ಥಾಪನೆ ಕುರಿತು ಸಲ್ಲಿಸಲಾಗಿದ್ದ Draft Statutes Governing establishment of Statistical Cell in University of Mysore, Mysore ಅಧಿನಿಯಮಕ್ಕೆ ಗೌರವಾನ್ವಿತ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ಅನುಮೋದನೆ ನೀಡಿರುವುದನ್ನು ಗಮನಿಸಿದ ಸಿಂಡಿಕೇಟ್ ವಿಶ್ವವಿದ್ಯಾನಿಲಯದಲ್ಲಿ ಅಂಕಿ ಅಂಶಗಳ ಘಟಕ ಕೇಂದ್ರವನ್ನು ವಿದ್ಯುಕ್ತವಾಗಿ ಪ್ರಾರಂಭಿಸುವ ಸಂಬಂಧ ಅಧಿಸೂಚನೆ ಹೊರಡಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/10.3** | ಹೊಸ ವಾಹನ TATA ACE/ HOP Tipper ಖರೀದಿ ವಿಷಯವನ್ನು ಸಿಂಡಿಕೇಟ್ ಸಭೆಗೆ "ಅನುಸಮರ್ಥನೆಗಾಗಿ" ಮಂಡಿಸುವ ಬಗೆಗೆ. |
| ತೀರ್ಮಾನ | ಸ್ವಚ್ಛ ಭಾರತ ಅಭಿಯಾನ ಕಾರ್ಯಕ್ರಮದ ಅಡಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆವರಣದಲ್ಲಿನ ತ್ಯಾಜ್ಯ ಮತ್ತು ಕಸವಿಲೇವಾರಿಗೆ "ಯು.ಪಿ.ಇ. ಯೋಜನೆಯ Adoption of Green Technology in the University Campus" ಶೀರ್ಷಿಕೆಯಿಂದ ಒಟ್ಟು ರೂ. 5,90,505/-ಗಳ ವೆಚ್ಚದಲ್ಲಿ ಅಧಿಕೃತ ಮಾರಾಟಗಾರರಾದ "ಮೆ॥ ಪ್ರೇರಣಾ ಮೋಟಾರ್ಸ್ (ಪ್ರೈ) ಲಿಮಿಟೆಡ್", ಆಲನಹಳ್ಳಿ ಲೇಔಟ್, ಬನ್ನೂರು ರಸ್ತೆ, ಮೈಸೂರು ಅವರಿಂದ ಹೊಸ ವಾಹನ TATA ACE/ HOP Tipper ಖರೀದಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/10.4** | JSS College of Arts, Commerce & Science (Autonomous), Ooty Road, Mysuru ಇಲ್ಲಿಗೆ ಒಟ್ಟು 09 ವಿಷಯಗಳಲ್ಲಿ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಬಗ್ಗೆ ತಜ್ಞರ ಸಮಿತಿ ಸಲ್ಲಿಸಿರುವ ಶಿಫಾರಸ್ಸಿಗೆ ಅನುಮೋದನೆ ಕೋರಿ. |
| ತೀರ್ಮಾನ | ತಜ್ಞರ ಸಮಿತಿಯು ಸಲ್ಲಿಸಿರುವ ವರದಿಯನ್ನು ಆಧರಿಸಿ, JSS College of Arts, Commerce & Science (Autonomous), Ooty Road, Mysuru ಇಲ್ಲಿಗೆ Social Work, Biochemistry, Biotechnology, Chemistry, Commerce, English, Kannada, Physics and Mathematics ಒಟ್ಟು 09 ವಿಷಯಗಳಲ್ಲಿ 2018-19ನೇ ಸಾಲಿಗೆ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ನೀಡುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/10.5** | ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ, ಇವರು ಮೈಸೂರು ವಿಶ್ವವಿದ್ಯಾನಿಲಯದ ಜೊತೆಗೆ ಶೈಕ್ಷಣಿಕವಾಗಿ ಸಂಶೋಧನೆ, ತರಬೇತಿ ಮತ್ತು ಇತರೆ ಸಂಬಂಧಿತ ಚಟುವಟಿಕೆಗಳ ಬಗ್ಗೆ ಒಡಂಬಡಿಕೆ(MOU) ಮಾಡಿಕೊಳ್ಳುವ ಬಗ್ಗೆ. |
| ತೀರ್ಮಾನ | ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ ಇವರು ಮೈಸೂರು ವಿಶ್ವವಿದ್ಯಾನಿಲಯದ ಜೊತೆಗೆ ಶೈಕ್ಷಣಿಕವಾಗಿ ಸಂಶೋಧನೆ, ತರಬೇತಿ ಮತ್ತು ಇತರೆ ಸಂಬಂಧಿತ ಚಟುವಟಿಕೆಗಳ ಕುರಿತಂತೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದಂತೆ ಒಡಂಬಡಿಕೆ(MOU) ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಅನುಮೋದಿಸಿತು. |

17/10/18

| | |
|---|---|
| 2018/10.6 | "ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016"ರ ಕಲಂ 37 ಹಾಗೂ ಮಾನ್ಯ ಸರ್ವೋಚ್ಛ ನ್ಯಾಯಾಯಲವು W.P. (civil) No:292/2016 & 997/2013 ರಲ್ಲಿ ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವ ಬಗ್ಗೆ. |
| ತೀರ್ಮಾನ | "ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016"ರ ಕಲಂ 37 ಹಾಗೂ ಮಾನ್ಯ ಸರ್ವೋಚ್ಛ ನ್ಯಾಯಾಯಲವು W.P. (civil) No:292/2016 & 997/2013 ರಲ್ಲಿ ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವ ಕುರಿತಂತೆ ರಾಜ್ಯ ಆಯುಕ್ತರು, ಅಂಗವಿಕಲ ವ್ಯಕ್ತಿಗಳ ಅಧಿನಿಯಮ ಕಛೇರಿ, ಬೆಂಗಳೂರು ಅವರು ಕೋರಿರುವಂತೆ (1) ಎಲ್ಲಾ ಸರ್ಕಾರಿ ಮತ್ತು ಸರ್ಕಾರದ ದೇಣಿಗೆ ಪಡೆಯುತ್ತಿರುವ ಉನ್ನತ ಶಿಕ್ಷಣ ಸಂಸ್ಥೆಗಳು ನಿರ್ದಿಷ್ಟ ಮಾನದಂಡ ಅಂಗವಿಕಲತೆ ಇರುವವರಿಗೆ (Benchmark Disability) ಕನಿಷ್ಟ ಶೇ. 5ರಷ್ಟು ಸ್ಥಾನಗಳನ್ನು (Seat) ಮೀಸಲಿಡಲು; (2) ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ನಿರ್ದಿಷ್ಟ ಮಾನದಂಡದ ಅಂಗವಿಕಲತೆ ಇರುವವರಿಗೆ (Benchmark Disability) ಪ್ರವೇಶದ ವಯೋಮಿತಿಯಲ್ಲಿ ಐದು ವರ್ಷಗಳ ರಿಯಾಯಿತಿ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2018/10.7 | ಡಾ. ಎಂ.ಜಿ.ಮಂಜುನಾಥ, ಪ್ರಾಧ್ಯಾಪಕರು, ಕನ್ನಡ ವಿಭಾಗ ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ ಮತ್ತು ನಿರ್ದೇಶಕರು, ಪ್ರಸಾರಾಂಗ ಇವರಿಗೆ ಅವರ ಕುಟುಂಬದೊಡನೆ ದುಬೈಗೆ ತೆರಳಲು ಅನುಮತಿ ನೀಡಿರುವ ಸಂಬಂಧ ಅನುಸಮರ್ಥಿಸುವ ಬಗ್ಗೆ. |
| ತೀರ್ಮಾನ | ಡಾ. ಎಂ.ಜಿ.ಮಂಜುನಾಥ, ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ ಮತ್ತು ನಿರ್ದೇಶಕರು, ಪ್ರಸಾರಾಂಗ ಇವರಿಗೆ ಅವರ ಕುಟುಂಬದವರೊಡನೆ ದಿನಾಂಕ 10-08-2018ರಿಂದ 17-08-2018ರವರೆಗೆ 08 ದಿನಗಳವರೆಗೆ ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ತೆರನಾದ ಆರ್ಥಿಕ ಹೊಣೆಗಾರಿಕೆಯಿಲ್ಲದಂತೆ ವೈಯಕ್ತಿಕ ಭೇಟಿಯ ನಿಮಿತ್ತ ದುಬೈಗೆ ತೆರಳಲು ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2018/10.8 | Master Course in Material Science (PG) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿರುವ ಬಗ್ಗೆ- ಅನುಸಮರ್ಥನೆಗಾಗಿ |
| ತೀರ್ಮಾನ | ಶೈಕ್ಷಣಿಕ ಹಿತದೃಷ್ಟಿಯಿಂದ Master Course in Material Science (PG) ಅಧ್ಯಯನ ಮಂಡಳಿಯನ್ನು ಮೂರು ವರ್ಷಗಳ ಅವಧಿಗೆ ಪುನರ್‌ರಚಿಸಿ ಅಧಿಸೂಚನೆ ಹೊರಡಿಸಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2018/10.9 | ಸಾರ್ವಜನಿಕ ಆಡಳಿತ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ. |
| | ಕುಲಸಚಿವರಾದ ಪ್ರೊ. ಆರ್.ರಾಜಣ್ಣನವರು ಪ್ರೊ. ಮಾನೆಯವರ ವಿರುದ್ಧ ಆರೋಪಗಳಿರುವುದರಿಂದ ಅವರ ಹೆಸರನ್ನು ಈ ಪಟ್ಟಿಯಿಂದ ಕೈಬಿಡಬೇಕಾಗುತ್ತದೆ. ಆದ್ದರಿಂದ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಿಭಾಗದ ಅಧ್ಯಕ್ಷರಿಂದ ಹೊಸದಾಗಿ ಅಧ್ಯಾಪಕರುಗಳ ಪಟ್ಟಿಯನ್ನು ಪಡೆದು ಅವರಲ್ಲಿ ಆಯ್ಕೆಮಾಡಿಕೊಳ್ಳಬೇಕೆಂದು ಸಭೆಯ ಗಮನಕ್ಕೆ ತಂದರು. ಸದರಿ ವಿಷಯದಲ್ಲಿ ಇವರೊಬ್ಬರೇ ವಿಭಾಗದಲ್ಲಿ ಖಾಯಂ ಪ್ರಾಧ್ಯಾಪಕರಾಗಿರುವುದರಿಂದ ಇವರನ್ನು ಅಧ್ಯಯನ ಮಂಡಳಿಗೆ ಸೇರ್ಪಡೆಮಾಡಿಕೊಳ್ಳುವುದರ ಬಗ್ಗೆ ಕುಲಪತಿಗಳು ಚರ್ಚಿಸಿದ ಬಳಿಕ ನಿಯಮಗಳನುಸಾರ ಕುಲಪತಿಗಳ ವಿವೇಚನಾಧಿಕಾರಕ್ಕೆ ಬಿಡಲು ಎಲ್ಲಾ ಸಿಂಡಿಕೇಟ್ ಸದಸ್ಯರು ಅಭಿಪ್ರಾಯಿಸಿದರು. |

17/10/18

| | |
|---|---|
| ತೀರ್ಮಾನ | ಸಾರ್ವಜನಿಕ ಆಡಳಿತ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/10.10** | ಟಿಬೆಟಿಯನ್ ಸ್ಟಡೀಸ್ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ. |
| ತೀರ್ಮಾನ | ಮಂಡಿಸಲಾಗಿರುವ ಪಟ್ಟಿಯಲ್ಲಿ ನಮೂದಿತವಾಗಿರುವ Dr. Ngawang Jordhen, Professor of Buddhist Philosophy and Asian Studies, Intenational Buddhist Academy, Kathmandu, Nepal ಇವರ ಹೆಸರನ್ನು ಹೊರತುಪಡಿಸಿ ಪಟ್ಟಿಯಲ್ಲಿನ ಉಳಿದ ವಿಷಯತಜ್ಞರುಗಳಲ್ಲಿ ಟಿಬೆಟಿಯನ್ ಸ್ಟಡೀಸ್ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/10.11** | ವಿಶ್ವವಿದ್ಯಾನಿಲಯ ತೋಟಗಾರಿಕಾ ವಿಭಾಗಕ್ಕೆ ಅವಶ್ಯಕವಿರುವ ಸಾವಯವ ಗೊಬ್ಬರ ಹೂವಿನ ಬೀಜಗಳು ಇತ್ಯಾದಿಗಳನ್ನು ಖರೀದಿಸುವ ಬಗ್ಗೆ. |
| ತೀರ್ಮಾನ | 2018-19ನೇ ಸಾಲಿನಲ್ಲಿ ತೋಟಗಾರಿಕೆ ನಿರ್ವಹಣೆಗಾಗಿ ಮೀಸಲಿಟ್ಟಿರುವ ರೂ. 5.00 ಲಕ್ಷಗಳಲ್ಲಿ ಉಳಿದಿರುವ ಮೊಬಲಗಿನಲ್ಲಿ ವಿಶ್ವವಿದ್ಯಾನಿಲಯ ತೋಟಗಾರಿಕಾ ವಿಭಾಗಕ್ಕೆ ಅವಶ್ಯಕವಿರುವ ಸಾವಯವ ಗೊಬ್ಬರ ಹೂವಿನ ಬೀಜಗಳು ಇತ್ಯಾದಿಗಳನ್ನು ಖರೀದಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/10.12** | ಕಾನೂನು, ಬಯೋಕೆಮಿಸ್ಟ್ರಿ, ಮಾಲಿಕ್ಯುಲರ್ ಬಯಾಲಜಿ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರನ್ನು ನೇಮಿಸುವ ಬಗ್ಗೆ. |
| ತೀರ್ಮಾನ | ಡಾ. ರಮೇಶ್, ಸಹ ಪ್ರಾಧ್ಯಾಪಕರು ಅವರ ವಿಭಾಗದ ಅಧ್ಯಕ್ಷರ ಅವಧಿಯು ದಿನಾಂಕ 31-10-2018ಕ್ಕೆ ಅಂತ್ಯಗೊಳ್ಳುತ್ತಿದ್ದು ಅವರ ನಂತರ ಸರದಿಯಂತೆ ಜ್ಯೇಷ್ಠತೆಯಲ್ಲಿ ಹಿರಿಯ ಪ್ರಾಧ್ಯಾಪಕರಾಗಿರುವ ಪ್ರೊ. ಸಿ.ಬಸವರಾಜು ಅವರನ್ನು ದಿನಾಂಕ 1-11-2018ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶ ನೀಡುವವರೆಗೆ ಕಾನೂನು ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕಮಾಡಲು ಸಿಂಡಿಕೇಟ್ ಅನುಮೋದಿಸಿತು.<br><br>ಪ್ರೊ. ಕೆ.ಕೆಂಪರಾಜು ಅವರ ವಿಭಾಗದ ಅಧ್ಯಕ್ಷರ ಅವಧಿಯು ದಿನಾಂಕ 23-10-2018ಕ್ಕೆ ಅಂತ್ಯಗೊಳ್ಳುತ್ತಿದ್ದು ಅವರ ನಂತರ ಜೇಷ್ಠತೆಯಲ್ಲಿ ಹಿರಿಯರಾಗಿರುವ ಪ್ರೊ. ಬಿ.ಎಸ್.ವಿಶ್ವನಾಥ್, ಪ್ರಾಧ್ಯಾಪಕರು ಇವರನ್ನು ಬಯೋಕೆಮಿಸ್ಟ್ರಿ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ದಿನಾಂಕ 24-10-2018ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶ ನೀಡುವವರೆಗೆ ಅಧ್ಯಕ್ಷರನ್ನಾಗಿ ನೇಮಕಮಾಡಲು ಸಿಂಡಿಕೇಟ್ ಅನುಮೋದಿಸಿತು.<br><br>ಡಾ. ಗೋಪಾಲ್ ಮರಾಠೆ, ಸಹ ಪ್ರಾಧ್ಯಾಪಕರು ಅವರು ಮಾಲಿಕ್ಯುಲರ್ ಬಯಾಲಾಜಿ ಅಧ್ಯಯನ ವಿಭಾಗದ ಅಧ್ಯಕ್ಷರಾಗಿದ್ದು ಅವರ ಅವಧಿಯು ದಿನಾಂಕ 23-10-2018ಕ್ಕೆ ಮುಕ್ತಾಯಗೊಳ್ಳುತ್ತಿದ್ದು ಸದರಿ ಅಧ್ಯಯನ ವಿಭಾಗದಲ್ಲಿ ಖಾಯಂ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರು ಇಲ್ಲದಿರುವುದರಿಂದ ಬಯೋಕೆಮಿಸ್ಟ್ರಿ ಅಧ್ಯಯನ ವಿಭಾಗದ ಅಧ್ಯಾಪಕರುಗಳ ಜೇಷ್ಠತ ಪಟ್ಟಿಯಲ್ಲಿ ಸರದಿಯಂತೆ ಹಿರಿಯ ಪ್ರಾಧ್ಯಾಪಕರಾಗಿರುವ ಪ್ರೊ. ಕೆ.ಕೆಂಪರಾಜು ಅವರನ್ನು ಅಧ್ಯಕ್ಷರನ್ನಾಗಿ ದಿನಾಂಕ 24-10-2018ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶ ನೀಡುವವರೆಗೆ ಅಧ್ಯಕ್ಷರನ್ನಾಗಿ ನೇಮಕಮಾಡಲು ಸಿಂಡಿಕೇಟ್ ಅನುಮೋದಿಸಿತು. |
| **2018/10.13** | ಅರ್ಥಶಾಸ್ತ್ರ ಮತು ಸಹಕಾರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸುವ ಬಗ್ಗೆ. |
| ತೀರ್ಮಾನ | ಪ್ರೊ. ತುಳಸಿಮಾಲ, ಪ್ರಾಧ್ಯಾಪಕರು ಅವರು ಶ್ರೀಕೃಷ್ಣದೇವರಾಯ ವಿಶ್ವವಿದ್ಯಾನಿಲಯಕ್ಕೆ ಕುಲಸಚಿವರಾಗಿ ನೇಮಕಗೊಂಡು ವಿಶ್ವವಿದ್ಯಾನಿಲಯದಿಂದ ಬಿಡುಗಡೆಗೊಂಡಿರುವುದರಿಂದ |

Rajkumar 17/10/18

| | |
|---|---|
| | ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದಲ್ಲಿ ಸರದಿಯಂತೆ ಜೇಷ್ಠತಾ ಪಟ್ಟಿಯಲ್ಲಿ ಹಿರಿಯ ಪ್ರಾಧ್ಯಾಪಕರಾಗಿರುವ ಪ್ರೊ. ಎಂ.ಇಂದಿರಾ ಅವರನ್ನು ಅಧ್ಯಕ್ಷರನ್ನಾಗಿ ದಿನಾಂಕ 23-09-2018ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶ ನೀಡುವವರೆಗೆ ಅಧ್ಯಕ್ಷರನ್ನಾಗಿ ನೇಮಕಮಾಡಲು ಘಟನೋತ್ತರವಾಗಿ ಸಿಂಡಿಕೇಟ್ ಅನುಮೋದಿಸಿತು. |
| **2018/10.14** | 2018-19ನೇ ಶೈಕ್ಷಣಿಕ ಸಾಲಿನ ಎಲ್ಲಾ ಸ್ನಾತಕೋತ್ತರ ಕೋರ್ಸ್‌ಗಳು ಹಾಗೂ ಹೊಸದಾಗಿ ಪ್ರಾರಂಭವಾದ ಕೋರ್ಸ್‌ಗಳಿಗೆ ಸೀಟುಗಳ ಸಂಖ್ಯೆಯನ್ನು ನಿಗದಿಪಡಿಸಿರುವ ಬಗ್ಗೆ. |
| **ತೀರ್ಮಾನ** | 2018-19ನೇ ಶೈಕ್ಷಣಿಕ ಸಾಲಿನ ಎಲ್ಲಾ ಸ್ನಾತಕೋತ್ತರ ಕೋರ್ಸ್‌ಗಳು/ಪಿ.ಜಿ.ಡಿಪ್ಲೊಮಾ/ ಡಿಪ್ಲೊಮಾ/ಸರ್ಟಿಫಿಕೇಟ್ ಕೋರ್ಸ್ ಹಾಗೂ ಹೊಸದಾಗಿ ಪ್ರಾರಂಭವಾದ ಕೋರ್ಸ್‌ಗಳಿಗೆ ಸೀಟುಗಳ ಸಂಖ್ಯೆ (Seat Matrix)ಯನ್ನು ನಿಗದಿಪಡಿಸಲು ವಿಶ್ವವಿದ್ಯಾನಿಲಯವು ಈಗಾಗಲೇ ಅನುಸರಿಸಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/10.15** | 2008 ರಿಂದ 2014ರ ಶೈಕ್ಷಣಿಕ ಸಾಲಿನಿಂದ 06 ವರ್ಷಗಳ ಎಂಎಸ್ಸಿ.ಇಡಿ ಪದವಿಯು ಬಿ.ಎಸ್ಸಿ.ಬಿ.ಇಡಿ ಮತ್ತು ಎಂ.ಎಸ್ಸಿ ಪದವಿಗಳಿಗೆ ಸಮಾನವೆಂದು ಅನುಷ್ಠಾನಗೊಳಿಸಿರುವುದಕ್ಕೆ ಆರ್ಡಿನೆನ್ಸ್ ಹೊರಡಿಸುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜಾದ ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ 2008-09ನೇ ಸಾಲಿನಿಂದ 2014-15ನೇ ಶೈಕ್ಷಣಿಕ ಸಾಲಿನವರೆಗೂ ಚಾಲ್ತಿಯಲ್ಲಿರುವ ಆರು ವರ್ಷಗಳ M.Sc.,Ed Integrated ಕೋರ್ಸ್ ಸಂಬಂಧ ಆರ್ಡಿನೆನ್ಸ್‌ಗೆ ಹೊರಡಿಸಿರುವ ಅಧಿಸೂಚನೆಯ ಪ್ರಕಾರ ಆರು ವರ್ಷಗಳ M.Sc.,Ed. Integrated ಕೋರ್ಸ್‌ನಲ್ಲಿ 04 ವರ್ಷ ಪೂರೈಸಿದವರಿಗೆ B.Sc.,Ed. ಪದವಿಯನ್ನು ಮತ್ತೆರಡು ವರ್ಷ ಪೂರೈಸಿ ಉತ್ತೀರ್ಣರಾದವರಿಗೆ M.Sc.,Ed ಪದವಿಯನ್ನು ನಮೂದಾಗಿರುವುದನ್ನು ಪರಿಗಣಿಸಿದ ಸಿಂಡಿಕೇಟ್ 2012-13ರ ಶೈಕ್ಷಣಿಕ ಸಾಲಿನಿಂದ B.Sc.,Ed. ಮತ್ತು 2014-15ನೇ ಶೈಕ್ಷಣಿಕ ಸಾಲಿನಿಂದ M.Sc.,Ed ಪದವಿಯನ್ನು ನೀಡುವಂತೆ ಆರ್ಡಿನೆನ್ಸ್‌ನಲ್ಲಿ ಸೇರ್ಪಡೆ ಮಾಡಿಕೊಳ್ಳಲು ಸಿಂಡಿಕೇಟ್ ಸಹ ಅನುಮೋದಿಸಿತು. |
| **2018/10.16** | UG , CBCS ವಿನಿಯಮಾವಳಿಗೆ ಸರ್ಕಾರದ ಅನುಮೋದನೆ ಪಡೆಯುವ ಬಗೆಗೆ. |
| **ತೀರ್ಮಾನ** | 2018-19ನೇ ಶೈಕ್ಷಣಿಕ ಸಾಲಿನಿಂದ ಎಲ್ಲಾ ಸ್ನಾತಕ ವಿಷಯಗಳಲ್ಲಿ CBCS ಪದ್ಧತಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಎಲ್ಲಾ ಘಟಕ/ಸ್ವಾಯತ್ತ/ಸಂಯೋಜಿತ ಕಾಲೇಜುಗಳಲ್ಲಿ ನಿಯಮಾವಳಿಯ ಅನ್ವಯ ಅಳವಡಿಸಲಾಗಿದ್ದು ಕೆಲವು ಗೊಂದಲಗಳ ನಿವಾರಣೆಗಾಗಿ ಸದರಿ ವಿನಿಯಮಾವಳಿಗೆ ತಿದ್ದುಪಡಿಮಾಡಿಕೊಳ್ಳಲಾಗಿರುವುದನ್ನು ಗಮನಿಸಿದ ಸಿಂಡಿಕೇಟ್, ಪರಿಷ್ಕೃತ ಸಿ.ಬಿ.ಸಿ.ಎಸ್. – ಸಿ.ಎ.ಜಿ.ಪಿ. ಕರಡು ವಿನಿಯಮಾವಳಿಯನ್ನು ಅನುಮೋದಿಸಿತು ಹಾಗೂ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಸಹ ತೀರ್ಮಾನಿಸಿತು. |
| **2018/10.17** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎನ್.ರಾಚಯ್ಯ ಅಧ್ಯಯನ ಪೀಠಕ್ಕೆ ಸಂಬಂಧಿಸಿದ ಕರಡು ಅಧಿನಿಯಮ ಅನುಮೋದಿಸುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎನ್.ರಾಚಯ್ಯ ಅಧ್ಯಯನ ಪೀಠಕ್ಕೆ ಸಂಬಂಧಿಸಿದ ಕರಡು ಅಧಿನಿಯಮವನ್ನು ಅನುಮೋದಿಸಲಾಯಿತು ಹಾಗೂ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಸಹ ತೀರ್ಮಾನಿಸಿತು. ಮುಂದುವರೆದು ಸದರಿ ಪೀಠವನ್ನು ಬಾಬು ಜಗಜೀವನರಾಮ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರಕ್ಕೆ ವರ್ಗಾಯಿಸುವುದು ಸೂಕ್ತವಾಗಿದೆಯೆಂದು ಎಂದು ಅಭಿಪ್ರಾಯಿಸಿದ ಸಿಂಡಿಕೇಟ್ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರ ಅಭಿಪ್ರಾಯ ಪಡೆಯಲು ಸಹ ತೀರ್ಮಾನಿಸಿತು. |

| | |
|---|---|
| **2018/10.18** | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸುಗಳು |
| ತೀರ್ಮಾನ | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸುಗಳನ್ವಯ ಈಗಾಗಲೇ ಮಾನ್ಯ ಕುಲಪತಿಗಳ ಅನುಮೋದನೆಯೊಂದಿಗೆ ಕ್ರಮಗೊಂಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/10.19** | ಪಿಹೆಚ್.ಡಿ. ನಿಯಮಾವಳಿ 2017ರ ತಿದ್ದುಪಡಿಯ ಬಗೆಗೆ. |
| ತೀರ್ಮಾನ | ದಿನಾಂಕ 15-09-2018ರಂದು ಜರುಗಿದ ಶೈಕ್ಷಣಿಕ ಮಂಡಳಿ ಸಭೆಯು ಅನುಮೋದಿಸಿರುವಂತೆ ಪಿಎಚ್.ಡಿ. ನಿಯಮಾವಳಿ 5.9ರಲ್ಲಿರುವ "Undergo an interview before the probable guide(s) and" ಈ ವಾಕ್ಯವನ್ನು ತೆಗೆದುಹಾಕಿ ಪರಿಷ್ಕೃತ ಪಿಹೆಚ್.ಡಿ. ನಿಯಮಾವಳಿ 2017ನ್ನು ಸಿಂಡಿಕೇಟ್ ಸಹ ಅನುಮೋದಿಸಿತು. |
| **2018/10.20** | ಪ್ರೊ. ಸಣ್ಣಯ್ಯ ಆನಂದ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಪ್ರೊ. ಸಣ್ಣಯ್ಯ ಆನಂದ ಅಭಿನಂದನಾ ಸಮಿತಿ, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿನ ದತ್ತಿಯ ನಿಯಮಾನುಸಾರ ಎಲ್ಲಾ ಪ್ರಕ್ರಿಯೆಗಳನ್ನು ಪಾಲಿಸಿರುವುದರಿಂದ ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. 20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ. 80ರಷ್ಟು ಹಣವನ್ನು ಈ ಉದ್ದೇಶಕ್ಕಾಗಿ ಉಪಯೋಗಿಸಿಕೊಂಡು **"ಪ್ರೊ. ಸಣ್ಣಯ್ಯ ಆನಂದ ಚಿನ್ನದ ಪದಕ"** ದತ್ತಿ ಸ್ಥಾಪನೆ ಮಾಡಲು ಹಾಗೂ ದಾನಿಗಳ ಕೋರಿಕೆಯಂತೆ M.Sc. in Chemistry ಸ್ನಾತಕೋತ್ತರ ಪದವಿಯಲ್ಲಿ ಅತಿ ಹೆಚ್ಚು ಅಂಕ/ಉತ್ತಮ ಗ್ರೇಡ್ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ **"ಪ್ರೊ. ಸಣ್ಣಯ್ಯ ಆನಂದ ಚಿನ್ನದ ಪದಕ"**ವನ್ನು ಮುಂಬರುವ ಘಟಿಕೋತ್ಸವದಿಂದ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/10.21** | ಮೈಸೂರಿನ ಸೆಂಟ್ ಜೋಸೆಫ್ ಸಂಜೆ ಕಾಲೇಜನ್ನು ಮುಚ್ಚುವ ಬಗೆಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆ ಪಡೆದುಕೊಂಡ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ದಾಖಲಾತಿಯು ತುಂಬ ಕಡಿಮೆಯಿರುವುದರಿಂದ 2016-17ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲಾಗಿರುವ **ಮೈಸೂರಿನ ಸೆಂಟ್ ಜೋಸೆಫ್ ಸಂಜೆ ಕಾಲೇಜನ್ನು** ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಮುಚ್ಚಲು ಮತ್ತು ಈ ಕುರಿತು ಕಾಲೇಜಿನ ಬೋಧಕ ಮತ್ತು ಬೋಧಕೇತರರ ಆಕ್ಷೇಪಣೆ ಇರುವುದಿಲ್ಲವೆಂದು ಆಡಳಿತ ಮಂಡಳಿಯು ಲಿಖಿತವಾಗಿ ತಿಳಿಸಿರುವುದರಿಂದ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 65(2) (3)ರಂತೆ 2019-20ನೇ ಶೈಕ್ಷಣಿಕ ಸಾಲಿನಿಂದ ಸದರಿ ಕಾಲೇಜಿಗೆ ನೀಡಿರುವ ಸಂಯೋಜನೆಯನ್ನು ಹಿಂಪಡೆಯಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/10.22** | ಬಿ.ಇಡಿ ಪದವಿ ಕೋರ್ಸಿಗೆ ಅಧ್ಯಯನ ಮಂಡಳಿಯನ್ನು ಹೊಸದಾಗಿ ರಚಿಸುವ ಬಗ್ಗೆ. |
| | ಸಿಂಡಿಕೇಟ್ ಸದಸ್ಯರಾದ ಡಾ. ರಾಜಗೋಪಾಲ್ ಅವರು ಮಾತನಾಡಿ ಬಿ.ಇಡಿ. ಕಾಲೇಜುಗಳಲ್ಲಿ ವಿಶೇಷವಾಗಿ ಖಾಸಗಿ ಬಿ.ಎಡ್. ಕಾಲೇಜುಗಳಲ್ಲಿ ಎನ್.ಸಿ.ಟಿ.ಇ. ನಿಯಮಗಳಂತೆ ಹಾಗೂ ಸಿಬಿಸಿಎಸ್ ಪದ್ಧತಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಸ್ನಾತಕ ಶಿಕ್ಷಣ ಅಧ್ಯಯನ ಮಂಡಳಿಯಿಂದ ಪರಿಪೂರ್ಣ ಸಹಕಾರ ಮತ್ತು ಮಾರ್ಗದರ್ಶನ ಸಿಗುತ್ತಿಲ್ಲವಾದ್ದರಿಂದ ಸ್ನಾತಕ ಶಿಕ್ಷಣ ಅಧ್ಯಯನ ಮಂಡಳಿಗೆ ಪ್ರತ್ಯೇಕವಾಗಿ ಬಿ.ಇಡಿ. ಕಾಲೇಜಿನ ಪರಿಣಿತ ಅಧ್ಯಾಪಕರನ್ನು ಅಧ್ಯಕ್ಷರನ್ನಾಗಿ ನೇಮಿಸಬೇಕೆಂದು ಸಭೆಯಲ್ಲಿ ಕೋರಿದರು.<br><br>ಮಾನ್ಯ ಕುಲಪತಿಗಳು ನಿಯಮಾನುಸಾರ ಸ್ನಾತಕೋತ್ತರ ಅಧ್ಯಯನ ಮಂಡಳಿಯ ಅಧ್ಯಕ್ಷರೇ ಪದನಿಮಿತ್ತ ಸ್ನಾತಕ ಅಧ್ಯಯನ ಮಂಡಳಿಗೂ ಅಧ್ಯಕ್ಷರಾಗಿರಬೇಕಾಗುತ್ತದೆ. ಈ ಪದ್ಧತಿಯನ್ನು ಬದಲಿಸುವುದು ಸಾಧ್ಯವಾಗುವುದಿಲ್ಲ. ಈ ರೀತಿ ಮಾಡಿದಲ್ಲಿ ಇತರೆ ವಿಷಯಗಳ ಅಧ್ಯಯನ ಮಂಡಳಿಯಲ್ಲೂ ನೇಮಿಸಿಕೊಡುವಂತೆ ಒತ್ತಡ ಬರುತ್ತದೆಂದು |



17/10/18

| | |
|---|---|
| | ತಿಳಿಸಿದರು. ಡಾ. ಎ.ಟಿ. ಶಿವರಾಮು ಹಾಗೂ ಪ್ರೊ. ಎಸ್.ಎಲ್. ಸುರೇಶ್‌ರವರು ಇದಕ್ಕೆ ಧ್ವನಿಗೂಡಿಸಿದರು. ಮತ್ತು ಈ ಸಿಂಡಿಕೇಟ್ ಸದಸ್ಯರೆಲ್ಲರೂ ಬಿ.ಇಡಿ. ಕೋರ್ಸ್‌ನ ವಿದ್ಯಾರ್ಥಿಗಳು Internal – 400 ಅಂಕಗಳಿಗೆ ಮತ್ತು Theory – 200 ಅಂಕಗಳಿಗಾಗಿ ಕಾಲೇಜಿನಲ್ಲಿ ಅತ್ಯಂತ ಕಠಿಣ ಶ್ರಮದೊಂದಿಗೆ ಅಭ್ಯಾಸ ಮಾಡುತ್ತಾರೆ. ಆದರೆ ಈ ಪರೀಕ್ಷೆಗಳು ಸರಿಯಾಗಿ ಕ್ರಮವಾಗಿ ಜರುಗುತ್ತಿರುವ ಬಗ್ಗೆ ಪರಿಶೀಲನೆಗಾಗಿ ಬರುವ ಸಮಿತಿಯಲ್ಲಿ 4–5 ಸದಸ್ಯರಿದ್ದರೂ ಒಮ್ಮೊಮ್ಮೆ ಒಬ್ಬರೇ ಸದಸ್ಯರು ಬರುವರು. ಆದ್ದರಿಂದ ಸರದಿಯಂತೆ ನಿಯಮಾನುಸಾರ ಸಿಂಡಿಕೇಟ್ ಸದಸ್ಯರಾಗಿದ್ದಲ್ಲಿ ಅವರನ್ನು ಹೊರತುಪಡಿಸಿ ಹಿರಿಯ ಬಿ.ಇಡಿ. ಕಾಲೇಜಿನ ಪ್ರಾಂಶುಪಾಲರುಗಳನ್ನೊಳಗೊಂಡಂತೆ MAAC ಸಮಿತಿಯನ್ನು ರಚಿಸಲು ಕೋರಿದರು.<br><br>ಇದು ಆಡಳಿತಾತ್ಮಕ ವಿಷಯವಾಗಿರುವುದರಿಂದ ಸಂಬಂಧಪಟ್ಟವರಿಗೆ ಪತ್ರ ಬರೆದಲ್ಲಿ ತಾವು ಕೋರಿರುವಂತೆ ಸರದಿಯ ಆಧಾರದ ಮೇಲೆ, ಸಿಂಡಿಕೇಟ್ ಸದಸ್ಯರಾಗಿದ್ದಲ್ಲಿ ನಿಯಮಾನುಸಾರ ಅವರನ್ನು ಹೊರತುಪಡಿಸಿ, ಹಿರಿಯ ಬಿ.ಇಡಿ. ಕಾಲೇಜಿನ ಪ್ರಾಂಶುಪಾಲರುಗಳನ್ನು MAAC ತಂಡ ರಚಿಸಲು ಕ್ರಮವಹಿಸಲಾಗುವುದೆಂದು ಮಾನ್ಯ ಕುಲಪತಿಗಳು ತಿಳಿಸಿದರು ಮತ್ತು ಅಧ್ಯಯನ ಮಂಡಳಿಗಳನ್ನು ರಚಿಸುವ ಸಂಬಂಧ ಎಲ್ಲಾ ಸದಸ್ಯರ ಸಹಮತದೊಂದಿಗೆ ಈ ಕೆಳಗಿನಂತೆ ತೀರ್ಮಾನಿಸಲಾಯಿತು. |
| ತೀರ್ಮಾನ | ಸುದೀರ್ಘ ಚರ್ಚೆಯ ನಂತರ ಸ್ನಾತಕೋತ್ತರ ಶಿಕ್ಷಣ ಮಂಡಳಿಯ ಅಧ್ಯಕ್ಷರನ್ನೇ ಸ್ನಾತಕ ಶಿಕ್ಷಣ ಮಂಡಳಿಗೂ ಪದನಿಮಿತ್ತ ಅಧ್ಯಕ್ಷರನ್ನಾಗಿ ನೇಮಿಸಿ ಸದರಿ ಮಂಡಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಿ.ಇಡಿ. ಕಾಲೇಜಿನ ವಿಷಯ ಪರಿಣಿತ ಅಧ್ಯಾಪಕರನ್ನು ನಿಯಮಾನುಸಾರ ಸೇರ್ಪಡೆಮಾಡಿಕೊಳ್ಳಲು ಹಾಗೂ ಅವಶ್ಯವಿದ್ದಲ್ಲಿ ಮತ್ತಿಬ್ಬರು ವಿಶೇಷ ಆಹ್ವಾನಿತರನ್ನು ಸೇರ್ಪಡೆ ಮಾಡಿಕೊಂಡು ಸ್ನಾತಕ ಶಿಕ್ಷಣ ಮಂಡಳಿಯನ್ನು ರಚಿಸಲು ಹಾಗೂ ಸ್ನಾತಕೋತ್ತರ ಶಿಕ್ಷಣ ಮಂಡಳಿಯನ್ನು ನಿಯಮಾನುಸಾರ ರಚಿಸುವ ಅಧಿಕಾರವನ್ನು ಸಿಂಡಿಕೇಟ್ ಮಾನ್ಯ ಕುಲಪತಿಗಳಿಗೆ ನೀಡಲು ತೀರ್ಮಾನಿಸಿತು. |
| **2018/10.23** | 2019–20ನೇ ಶೈಕ್ಷಣಿಕ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು ಹಾಗೂ ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳಲ್ಲಿ ಸಂಯೋಜನೆ ನವೀಕರಣಕ್ಕಾಗಿ ಹಾಗೂ ಕಾಲೇಜುಗಳಲ್ಲಿ ಹೊಸ ವ್ಯಾಸಾಂಗ ಕ್ರಮಗಳನ್ನು ಪ್ರಾರಂಭಿಸಲು, ಹಾಲಿ ಇರುವ ಪ್ರವೇಶಾತಿ ಮಿತಿಯಲ್ಲಿ ಹೆಚ್ಚುವರಿ ಪ್ರವೇಶಾತಿ ನೀಡಲು, ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆ ನವೀಕರಿಸುವ ಮತ್ತು ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವ ಸಲುವಾಗಿ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಕುರಿತು. |
| ತೀರ್ಮಾನ | 2019–20ನೇ ಶೈಕ್ಷಣಿಕ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು, ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳಲ್ಲಿ ಸಂಯೋಜನೆ ನವೀಕರಣಕ್ಕಾಗಿ, ಕಾಲೇಜುಗಳಲ್ಲಿ ಹೊಸ ವ್ಯಾಸಾಂಗ ಕ್ರಮಗಳನ್ನು ಪ್ರಾರಂಭಿಸಲು, ಹಾಲಿ ಇರುವ ಪ್ರವೇಶಾತಿ ಮಿತಿಯಲ್ಲಿ ಹೆಚ್ಚುವರಿ ಪ್ರವೇಶಾತಿ ನೀಡಲು, ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆ ನವೀಕರಿಸುವ ಮತ್ತು ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವ ಸಲುವಾಗಿ ನಿಯಮಾನುಸಾರ ವಿಶ್ವವಿದ್ಯಾನಿಲಯದ ವಿಷಯವಾರು ನಿಕಾಯದ ಡೀನರು, ಪ್ರಾಧ್ಯಾಪಕರು, ಬಾಹ್ಯ ವಿಷಯ ಪರಿಣಿತರು, ಸಿ.ಡಿ.ಸಿ. ನಿರ್ದೇಶಕರನ್ನೊಳಗೊಂಡಂತೆ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/10.24** | 2018–19ನೇ ಶೈಕ್ಷಣಿಕ ಸಾಲಿನ ಮಂಡ್ಯದ ಸರ್ಕಾರಿ ಮಹಾವಿದ್ಯಾಲಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಗಳನ್ನು ಸಿಂಡಿಕೇಟ್ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |



17/10/18

| | |
|---|---|
| ತೀರ್ಮಾನ | 2018–19ನೇ ಶೈಕ್ಷಣಿಕ ಸಾಲಿನ ಮಂಡ್ಯದ ಸರ್ಕಾರಿ ಮಹಾವಿದ್ಯಾಲಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಗಳನ್ನು ಸಿಂಡಿಕೇಟ್ ಅನುಮೋದಿಸಿತು. |
| 2018/10.25 | 2018–19ನೇ ಶೈಕ್ಷಣಿಕ ಸಾಲಿನ ಮಂಡ್ಯದ ಮಹಿಳಾ ಸರ್ಕಾರಿ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| ತೀರ್ಮಾನ | 2018–19ನೇ ಶೈಕ್ಷಣಿಕ ಸಾಲಿನ ಮಂಡ್ಯದ ಮಹಿಳಾ ಸರ್ಕಾರಿ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| 2018/10.26 | 2018–19ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬಿ.ಎನ್ ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| ತೀರ್ಮಾನ | 2018–19ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬಿ.ಎನ್ ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| 2018/10.27 | 2018–19ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್. ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| ತೀರ್ಮಾನ | 2018–19ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್. ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| 2018/10.28 | 2018–19ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| ತೀರ್ಮಾನ | 2018–19ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| 2018/10.29 | 2018–19ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| ತೀರ್ಮಾನ | 2018–19ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| 2018/10.30 | 2018–19ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| ತೀರ್ಮಾನ | 2018–19ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| 2018/10.31 | ಸ್ವಾಮಿ ವಿವೇಕಾನಂದ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಸ್ವಾಮಿ ವಿವೇಕಾನಂದ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಪ್ರೊ. ಶೇಷಗಿರಿರಾವ್, ಪ್ರಾಧ್ಯಾಪಕರು (ನಿವೃತ್ತ), ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು |

| | |
|---|---|
| | ಇವರನ್ನು ಮತ್ತೊಂದು ವರ್ಷದ ಅವಧಿಗೆ ಮಾಹೆಯಾನ ರೂ. 8,000/- ಗಳ ಗೌರವಧನದೊಂದಿಗೆ ನೇಮಕಮಾಡಿಕೊಳ್ಳಲು ತೀರ್ಮಾನಿಸಿತು. |
| **2018/10.32** | ವಿಶ್ವವಿದ್ಯಾನಿಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ 09 ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರು ಅವರ ಸೇವೆಯನ್ನು 05 ವರ್ಷಗಳವರೆಗೆ ಮುಂದುವರೆಸುವಂತೆ ಕೋರಿರುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ 09 ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರು ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದಿರುವುದರಿಂದ ನ್ಯಾಯಾಲಯದ ಮುಂದಿನ ಆದೇಶದವರೆಗೆ ಸದರಿ ನೌಕರರನ್ನು ಯಥಾಸ್ಥಿತಿಯಲ್ಲಿ ಮುಂದುವರೆಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/10.33** | ದಿನಾಂಕ 14-08-2018ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಸ್ಥಾಯಿ ಸಮಿತಿ ಸಭೆಯ ಶಿಫಾರಸ್ಸನ್ನು ಪರಿಗಣಿಸುವ ಬಗೆಗೆ. |
| **ತೀರ್ಮಾನ** | ದಿನಾಂಕ 14-08-2018ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಸ್ಥಾಯಿ ಸಮಿತಿ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/10.34** | 2019ನೇ ಕ್ಯಾಲೇಂಡರ್ ವರ್ಷದಲ್ಲಿ ವಯೋಮಾನ ತಲುಪಿ ನಿವೃತ್ತರಾಗುವ ನೌಕರರಿಗೆ ಅನುಮತಿ ನೀಡುವ ಬಗ್ಗೆ. |
| **ತೀರ್ಮಾನ** | 2019ನೇ ಕ್ಯಾಲೇಂಡರ್ ವರ್ಷದಲ್ಲಿ ವಯೋಮಾನ ತಲುಪಿ ನಿವೃತ್ತರಾಗಲಿರುವ ವಿಶ್ವವಿದ್ಯಾನಿಲಯದ ಬೋಧಕೇತರ ಉದ್ಯೋಗಿಗಳ ಪಟ್ಟಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/10.35** | ತಾತ್ಕಾಲಿಕ ವಿಜ್ಞಾನ ಬೋಧಕ ಸಹಾಯಕರನ್ನಾಗಿ ನೇಮಿಸುವ ಬಗ್ಗೆ. |
| **ತೀರ್ಮಾನ** | ಅಧ್ಯಕ್ಷರು, ಕಮಿಟಿ ಫಾರ್ ದ ಡೆವಲಪ್‌ಮೆಂಟ್ ಆಫ್ ಸೈನ್ಸ್ ಇನ್ ಸ್ಕೂಲ್ಸ್ (ಸಿ.ಡಿ.ಎಸ್.ಎಸ್), ಮೈಸೂರು ವಿ.ವಿ., ಮೈಸೂರು ಇವರು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಬೆಂಗಳೂರು ಇವರು "ವಿಶೇಷ ಅಭಿವೃದ್ಧಿ ಯೋಜನೆ" ಅಡಿಯಲ್ಲಿ ಸಂಚಾರಿ ವಿಜ್ಞಾನ ಪ್ರಯೋಗಾಲಯ ಸ್ಥಾಪನೆ ಮತ್ತು ನಿರ್ವಹಣೆಗಾಗಿ ನೀಡಿರುವ 30 ಲಕ್ಷ ರೂಪಾಯಿಗಳ ಅನುದಾನದಲ್ಲಿ ಉಳಿದಿರುವ 7,22,177/-ಗಳಿಂದ ನಿಯಮಾನುಸಾರ ಒಂದು ವರ್ಷದ ಅವಧಿಗೆ ಅಧ್ಯಕ್ಷರು ಶಿಫಾರಸ್ಸು ಮಾಡಿರುವಂತೆ ವಿಜ್ಞಾನ ಪ್ರಯೋಗಾಲಯಗಳನ್ನು ಸ್ಥಾಪಿಸಿ ಅನುಭವ ಹೊಂದಿರುವ ಮತ್ತು ವಿಜ್ಞಾನ ವಿಷಯದ ಹಿನ್ನೆಲೆಯುಳ್ಳ ಶ್ರೀ ಸೋಮಶೇಖರ್ ಅವರನ್ನು ವಿಜ್ಞಾನ ಬೋಧಕ ಸಹಾಯಕರನ್ನಾಗಿ ಮಾಹೆಯಾನ ರೂ. 20,000/-ಗಳ ಸಂಭಾವನೆಯೊಂದಿಗೆ ನೇಮಿಸಲು; ಹಾಗೂ<br>ಸಂಚಾರಿ ವಿಜ್ಞಾನ ಪ್ರಯೋಗಾಲಯವು ಪ್ರೌಢಶಾಲೆಗಳಿಗೆ ಭೇಟಿ ನೀಡಿದಾಗ ಆಯಾ ಶಾಲೆಯ ವಿದ್ಯಾರ್ಥಿಗಳಿಗೆ ವಿವರಣೆ ನೀಡುವ ಉದ್ದೇಶಕ್ಕಾಗಿ ಭೌತಿಕ ವಿಜ್ಞಾನ, ರಸಾಯನ ವಿಜ್ಞಾನ, ಜೀವವಿಜ್ಞಾನ ಮತ್ತು ಗಣಿತ ವಿಭಾಗಗಳಿಂದ ಒಬ್ಬೊಬ್ಬರಂತೆ ಬೇರೆ ಬೇರೆ ದಿನಗಳಲ್ಲಿ ಬೇರೆ ಬೇರೆ ಸಂಶೋಧನಾ ವಿದ್ಯಾರ್ಥಿಯ ಸಹಾಯ ಪಡೆದು ಪ್ರತಿ ವಿದ್ಯಾರ್ಥಿಗೆ ದಿನಕ್ಕೆ 500/- ರೂ.ಗಳ ಸಂಭಾವನೆ ನೀಡಲು ಸಹ ಸಿಂಡಿಕೇಟ್ ತೀರ್ಮಾನಿಸಿತು. |
| **2018/10.36** | 2017-2018ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳು. |
| **ತೀರ್ಮಾನ** | ವಿ.ವಿ.ಕಾಯ್ದೆ 2000, ಪ್ರಕರಣ 32(3)(1)ರನ್ವಯ 2017-2018ನೇ ಸಾಲಿನ ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನೆಯಾಗದ ವಾರ್ಷಿಕ ಲೆಕ್ಕ ಪತ್ರಗಳನ್ನು ಸಿಂಡಿಕೇಟ್ ಪರಿಶೀಲಿಸಿ ಲೆಕ್ಕಪರಿಶೋಧನೆಗಾಗಿ ಸಲ್ಲಿಸಲು ಅನುಮೋದಿಸಿತು. |
| **2018/10.37** | ಡಾ. ತಿಮ್ಮರಾಯಪ್ಪ ಇವರನ್ನು ಡೆಪ್ಯೂಟಿ ಕೋ-ಆರ್ಡಿನೇಟರ್ ಹುದ್ದೆಯಿಂದ ಬಿಡುಗಡೆಗೊಳಿಸುವ ಬಗೆಗೆ. |
| **ತೀರ್ಮಾನ** | ಸುದೀರ್ಘ ಚರ್ಚೆಯ ನಂತರ 2018ರ ಕೆ.ಸೆಟ್ ಪರೀಕ್ಷೆಯ ಕೆಲಸಕಾರ್ಯಗಳು ಈಗಾಗಲೇ ಪ್ರಾರಂಭವಾಗಿರುವ ಹಿನ್ನೆಲೆಯಲ್ಲಿ ಮತ್ತು ಪರೀಕ್ಷೆಗಳ ಪಾವಿತ್ರ್ಯತೆ(Sanctity) ಮತ್ತು ಭದ್ರತೆಯ |

| | |
|---|---|
| | ದೃಷ್ಟಿಯಿಂದ ಕೇಂದ್ರದಲ್ಲಿನ Key Answers, OMR Sheetಗಳನ್ನು ಡಬ್ಬಲ್ ಲಾಕಿಂಗ್ ಸಿಸ್ಟಮ್ ವ್ಯವಸ್ಥೆಯಲ್ಲಿ ಇಡಲಾಗುವುದರಿಂದ ಡೆಪ್ಯೂಟಿ ಕೋ–ಆರ್ಡಿನೇಟರ್ ಹುದ್ದೆಯ ಅಗತ್ಯತೆಯನ್ನು ಪರಿಗಣಿಸಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಡಾ. ತಿಮ್ಮರಾಯಪ್ಪ ಡೆಪ್ಯೂಟಿ ಕೋ–ಆರ್ಡಿನೇಟರ್ ಅವರನ್ನು ತಕ್ಷಣದಿಂದ ಜಾರಿಗೆ ಬಂದಂತೆ ಬಿಡುಗಡೆಗೊಳಿಸಿ ಇವರ ಬದಲಿಗೆ ಸೂಕ್ತರಾದವರೊಬ್ಬರನ್ನು ಡೆಪ್ಯೂಟಿ ಕೋ–ಆರ್ಡಿನೇಟರ್ ಆಗಿ ನೇಮಕ ಮಾಡುವ ಅಧಿಕಾರವನ್ನು ಸಿಂಡಿಕೇಟ್ ಮಾನ್ಯ ಕುಲಪತಿಗಳಿಗೆ ನೀಡಲು ತೀರ್ಮಾನಿಸಿತು. |
| **2018/10.38** | 2018–19ನೇ ಶೈಕ್ಷಣಿಕ ಸಾಲಿನಿಂದ ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸೈನ್ಸ್‌ನಲ್ಲಿ ಎಂ.ಬಿ.ಎ ಕೋರ್ಸಿಗೆ Sponsored Seatಗಳನ್ನು ಮಂಜೂರು ಮಾಡುವ ಬಗ್ಗೆ. |
| | ಸನ್ಮಾನ್ಯ ಕುಲಪತಿಗಳು ಮಾತನಾಡಿ ಶತಮಾನೋತ್ಸವ ಆಚರಣೆಯ ಪ್ರಯುಕ್ತ ಎಂ.ಬಿ.ಎ ಕೋರ್ಸಿಗೆ ಆರು Sponsored Seatಗಳು ಮಾತ್ರ ಇದ್ದು ಅದನ್ನು ಆರರಿಂದ ಒಂಭತ್ತಕ್ಕೆ ವೃದ್ಧಿಸಿಕೊಳ್ಳಲು ತೀರ್ಮಾನಿಸಲಾಗಿದೆ. 2017–18ನೇ ಸಾಲಿನಲ್ಲಿ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಆ ಶೈಕ್ಷಣಿಕ ಸಾಲಿಗೆ ಸೀಮಿತವಾದಂತೆ 9 ಸೀಟುಗಳಿಗೆ ಪ್ರವೇಶಾತಿ ಕಲ್ಪಿಸಲಾಗಿದೆ. ಅದೇ ರೀತಿ ಈ ಶೈಕ್ಷಣಿಕ ಸಾಲಿಗೂ 9 ಸೀಟುಗಳಿಗೆ ಪ್ರವೇಶಾತಿ ಕಲ್ಪಿಸಲು B.N.BAHADUR Family Foundation, USA ಇವರು ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದಿರುವುದನ್ನು ಮಾನ್ಯ ಸಿಂಡಿಕೇಟ್ ಸದಸ್ಯರುಗಳ ಗಮನಕ್ಕೆ ತಂದು ಸೂಕ್ತ ನಿರ್ಧಾರ ತೆಗೆದುಕೊಳ್ಳಲು ತಮ್ಮ ಅಭಿಪ್ರಾಯ ತಿಳಿಸಬೇಕೆಂದರು.<br>ಈಗಾಗಲೇ ಪತ್ರ ಬರೆದಿರುವುದರಿಂದ ಈ ಸಾಲಿಗೂ 9 ಸೀಟುಗಳಿಗೆ ಪ್ರವೇಶ ನೀಡಲು ಅನುಮೋದಿಸಬಹುದಾಗಿದೆಯೆಂದು ಹಲವು ಸಿಂಡಿಕೇಟ್ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಸಿಂಡಿಕೇಟ್ ಈ ಕೆಳಗಿನಂತೆ ತೀರ್ಮಾನಿಸಿತು. |
| ತೀರ್ಮಾನ | 2018–19ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ ಮಾತ್ರ ಶ್ರೀ ಬಿ.ಎನ್.ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸೈನ್ಸ್‌ನಲ್ಲಿ ಎಂ.ಬಿ.ಎ ಕೋರ್ಸಿಗೆ Sponsored Seatಗಳನ್ನು 09 ಸೀಟುಗಳಿಗೆ ನಿಗಧಿಗೊಳಿಸಿ ಪ್ರವೇಶಾತಿ ನೀಡಲು ಸಿಂಡಿಕೇಟ್ ಅನುಮೋದಿಸಿತು. 2019–20ನೇ ಶೈಕ್ಷಣಿಕ ಸಾಲಿನಿಂದ ಶ್ರೀ ಬಿ.ಎನ್.ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸೈನ್ ಸಂಸ್ಥೆಯ ಸಲಹಾ ಸಮಿತಿ ಮತ್ತು B.N.BAHADUR Family Foundation, USA ಇವರು ವಿಶ್ವವಿದ್ಯಾನಿಲಯದೊಡನೆ ಒಡಂಬಡಿಕೆ ಮಾಡಿಕೊಂಡಿರುವಂತೆ ಆರು Sponsored Seatಗಳಿಗೆ ಮಾತ್ರ ಪ್ರವೇಶ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/10.39** | 2018–19ನೇ ಸಾಲಿನಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದೂರ ಶಿಕ್ಷಣ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ. |
| ತೀರ್ಮಾನ | 2018–19ನೇ ಸಾಲಿನಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದೂರ ಶಿಕ್ಷಣ ಕೋರ್ಸ್‌ಗಳನ್ನು ಪರಿಣಾಮಕಾರಿಯಾಗಿ ಹಂತಹಂತವಾಗಿ ಪ್ರಾರಂಭಿಸಲು ಈ ಕೆಳಕಂಡ ವಿಷಯಗಳನ್ನು ಸಿಂಡಿಕೇಟ್ ಅನುಮೋದಿಸಿತು.<br>1. Approval for notifying call for admission<br>2. Fixation of fee for each course recommended by the existing Fee Structure Committee of the University.<br>3. Constitution of Admission and Selection Committees for each course.<br>4. Establishment of Office of the Director<br>5. Appointment of full time Director along with supporting staff. |

Rajkumar 17/10/18

| | |
|---|---|
| **2018/10.40** | ಡಾ. ವೈ.ಸಿ ನಂಜುಂಡಯ್ಯ, ನಿವೃತ್ತ ಸಹ ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ, ಯುವರಾಜ ಕಾಲೇಜು, ಮೈಸೂರು ಇವರನ್ನು ವಿಷಮ ಚಾತುರ್ಮಾಸದ ಅಂತ್ಯದವರೆಗೆ ಮುಂದುವರಿಸುವ ಬಗ್ಗೆ. |
| ತೀರ್ಮಾನ | ಡಾ. ವೈ.ಸಿ ನಂಜುಂಡಯ್ಯ, ನಿವೃತ್ತ ಸಹ ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ, ಯುವರಾಜ ಕಾಲೇಜು, ಮೈಸೂರು ಇವರ ಸೇವೆಯನ್ನು 01-08-2018ರಿಂದಲೇ ಜಾರಿಗೆ ಬಂದಂತೆ ವಿಷಮ ಚಾತುರ್ಮಾಸದ ಅಂತ್ಯದವರೆಗೆ ಮಾಹೆಯಾನ ರೂ. 25,000/-ಗಳಂತೆ ಮುಂದುವರಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/10.41** | Sanction of Sabbatical leave to Dr. Ningamma C Betsur, Chairman and Associate Professor, Department of Studies in Education, Manasagangothri, Mysuru, for a period of one year. |
| Decision | The Syndicate has approved to sanction Sabbatical leave to Dr. Ningamma C Betsur, Chairman and Associate Professor, Department of Studies in Education, Manasagangothri, Mysuru, for a period of one year from 22-10-2018 to 21-10-2019 based on the recommendations of the Expert Committee. |
| **2018/10.42** | ಚಿನ್ನದ ಪದಕ ತಾಂತ್ರಿಕ ಪರಿಶೀಲನೆಗೆ ಅಕ್ಕಸಾಲಿಗನ್ನು ನಿಯೋಜಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಿಯಮಾನುಸಾರ ಘಟಿಕೋತ್ಸವಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಗುವ ಚಿನ್ನದ ಪದಕಗಳನ್ನು ತಾಂತ್ರಿಕ ಪರಿಶೀಲನೆಗೆಗಾಗಿ ಕರ್ನಾಟಕ ರಾಜ್ಯ ಸರ್ಕಾರದ ಅಡಿಯಲ್ಲಿ ನೋಂದಾಯಿತಗೊಂಡ ಅಕ್ಕಸಾಲಿಗ ಸಂಘ-ಸಂಸ್ಥೆಯಿಂದ ಒಬ್ಬರು ಅಕ್ಕಸಾಲಿಗನನ್ನು ನೇಮಿಸಿಕೊಳ್ಳಲು ಸಿಂಡಿಕೇಟ್ ಅನುಮೋದಿಸಿತು. |

ಕೊನೆಯಲ್ಲಿ ಸಿಂಡಿಕೇಟ್ ಸಭೆಗೆ ಆಗಮಿಸಿ ಉತ್ತಮ ಸಲಹೆಗಳನ್ನು ನೀಡಿ ಸಹಕರಿಸಿದ ಎಲ್ಲಾ ಸದಸ್ಯರಿಗೂ ಅಧ್ಯಕ್ಷರು ವಂದನೆಗಳನ್ನು ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯವಾಯಿತು.

17/10/18

ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ　　　　ಕುಲಪತಿಗಳು ಮತ್ತು ಅಧ್ಯಕ್ಷರು